**C**

**CCE PR**
**NSR & NSPR**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003

KARNATAKA SECONDARY EDUCATION EXAMINATION BOARD, MALLESHWARAM, BENGALURU – 560 003

ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್ / ಜುಲೈ, 2022

S.S.L.C. EXAMINATION, JUNE / JULY, 2022

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 01. 07. 2022 ] **ಸಂಕೇತ ಸಂಖ್ಯೆ : 62-K**

Date : 01. 07. 2022 ] **CODE NO. : 62-K**

## ವಿಷಯ : ತೃತೀಯ ಭಾಷೆ — ಕನ್ನಡ

## Subject : Third Language — KANNADA

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. & ಎನ್.ಎಸ್.ಪಿ.ಆರ್.)**

**(Private Repeater / NSR & NSPR)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | **ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 10 × 1 = 10 |
| 1. | ಕೆಳಗಿನವುಗಳಲ್ಲಿ ಯೋಗವಾಹಗಳನ್ನು ಗುರುತಿಸಿ<br>(ಎ) ಐ, ಔ (ಬಿ) ಜ, ಞ<br>(ಸಿ) ಅಂ, ಅಃ (ಡಿ) ಇ, ಈ<br>***ಉತ್ತರ :*** (ಸಿ) ಅಂ, ಅಃ | |
| 2. | ಕನ್ನಡದಲ್ಲಿ ಅನೇಕ 'ಇಂಗ್ಲಿಷ್' ಪದಗಳು ಬಳಕೆಯಲ್ಲಿವೆ. ಇಂಗ್ಲಿಷ್ ಪದಕ್ಕೆ ಬಳಸಿರುವ ಲೇಖನ ಚಿಹ್ನೆ<br>(ಎ) ಉದ್ಧರಣ ಚಿಹ್ನೆ (ಬಿ) ವಾಕ್ಯವೇಷ್ಟನ ಚಿಹ್ನೆ<br>(ಸಿ) ಆವರಣ ಚಿಹ್ನೆ (ಡಿ) ಅರ್ಧವಿರಾಮ ಚಿಹ್ನೆ<br>***ಉತ್ತರ :*** (ಬಿ) ವಾಕ್ಯವೇಷ್ಟನ ಚಿಹ್ನೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 3. | 'ಋಣ' ಪದದ ತದ್ಭವ ರೂಪ<br>(ಎ) ಗುಣ (ಬಿ) ಋಣಾ<br>(ಸಿ) ರಿಣ (ಡಿ) ವರ್ಣ<br>***ಉತ್ತರ :*** (ಸಿ) ರಿಣ | |
| 4. | ಇದು ಆತ್ಮಾರ್ಥಕ ಸರ್ವನಾಮ<br>(ಎ) ತಮ್ಮ (ಬಿ) ನಿಮ್ಮ<br>(ಸಿ) ನೀವು (ಡಿ) ನಾನು<br>***ಉತ್ತರ :*** (ಎ) ತಮ್ಮ | |
| 5. | ದ್ವಿರುಕ್ತಿ ಪದವನ್ನು ಗುರುತಿಸಿ<br>(ಎ) ಸರಸರ (ಬಿ) ಮನೆಮಠ<br>(ಸಿ) ಫಳಫಳ (ಡಿ) ಬೇಗಬೇಗ<br>***ಉತ್ತರ :*** (ಡಿ) ಬೇಗಬೇಗ | |
| 6. | ಇದು ಲೋಪ ಸಂಧಿಗೆ ಉದಾಹರಣೆ<br>(ಎ) ಮಹಾಲಯ (ಬಿ) ಮಳೆಗಾಲ<br>(ಸಿ) ವೈರಾಗ್ಯವಿದು (ಡಿ) ಮಾತನ್ನು<br>***ಉತ್ತರ :*** (ಡಿ) ಮಾತನ್ನು | |
| 7. | ಕೆಳಗಿನವುಗಳಲ್ಲಿ ಅನ್ಯದೇಶೀಯವಲ್ಲದ ಪದ<br>(ಎ) ನೇಸರು (ಬಿ) ಕಾಗದ<br>(ಸಿ) ಕವರು (ಡಿ) ಹೋಟೆಲ್<br>***ಉತ್ತರ :*** (ಎ) ನೇಸರು | |
| 8. | 'ಇಂಚರ' ಪದ ಈ ಸಮಾಸಕ್ಕೆ ಉದಾಹರಣೆ<br>(ಎ) ತತ್ಪುರುಷ ಸಮಾಸ (ಬಿ) ಕರ್ಮಧಾರಯ ಸಮಾಸ<br>(ಸಿ) ಕ್ರಿಯಾ ಸಮಾಸ (ಡಿ) ದ್ವಿಗು ಸಮಾಸ<br>***ಉತ್ತರ :*** (ಬಿ) ಕರ್ಮಧಾರಯ ಸಮಾಸ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 9. | 'ಪೊಲೀಸರು ರಾಮ್‌ಸಿಂಗನನ್ನು ಗುಂಡಿಕ್ಕಿ ಕೊಂದರು.' ಈ ವಾಕ್ಯದಲ್ಲಿರುವ ದ್ವಿತೀಯ ವಿಭಕ್ತಿ ಪ್ರತ್ಯಯದ ಪದ<br>(ಎ) ಕೊಂದರು (ಬಿ) ಗುಂಡಿಕ್ಕಿ<br>(ಸಿ) ಪೊಲೀಸರು (ಡಿ) ರಾಮ್‌ಸಿಂಗ್‌ನನ್ನು<br>***ಉತ್ತರ :*** (ಡಿ) ರಾಮ್‌ಸಿಂಗ್‌ನನ್ನು | |
| 10. | 'ಮಗು' ಪದದ ಬಹುವಚನ ರೂಪ<br>(ಎ) ಮಗುಗಳು (ಬಿ) ಹುಡುಗರು<br>(ಸಿ) ಮಕ್ಕಳು (ಡಿ) ಬಾಲಕರು<br>***ಉತ್ತರ :*** (ಸಿ) ಮಕ್ಕಳು | |
| II. | **ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 5 × 1 = 5 |
| 11. | ಶಿಶುನಾಳದ ಸಂತ : ಶರೀಫರು :: ಹುಲಗೂರಿನ ಸಂತ : ......................... .<br>***ಉತ್ತರ :*** ಖಾದರ್‌ಷಾ ವಲಿ | |
| 12. | ಸೋಮಣ್ಣ : ಸ್ವಾತಂತ್ರ್ಯ ಹೋರಾಟಗಾರ :: ಕುಲಕರ್ಣಿ : ......................... .<br>***ಉತ್ತರ :*** ಭಾರತೀಯ ಅಧಿಕಾರಿ | |
| 13. | ಆಚಾರವೇ : ಸ್ವರ್ಗ :: ಅನಾಚಾರವೇ : ......................... .<br>***ಉತ್ತರ :*** ನರಕ | |
| 14. | ಬಸವಣ್ಣನವರ ವಚನಗಳ ಅಂಕಿತ : ಕೂಡಲ ಸಂಗಮದೇವ :: ಪುರಂದರದಾಸರ ಕೀರ್ತನೆಗಳ ಅಂಕಿತ : ......................... .<br>***ಉತ್ತರ :*** ಪುರಂದರ ವಿಠಲ | |
| 15. | ಬೆಂಗಳೂರಿನ : ತಿರುಮಲೆ ರಾಜಮ್ಮ :: ನಂಜನಗೂಡಿನ : ......................... .<br>***ಉತ್ತರ :*** ತಿರುಮಲಾಂಬ | |
| III. | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ**<br>**(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | 5 × 1 = 5 |
| 16 | ಅಮೆರಿಕಾದ ಪೊಲೀಸರು ಭಾರತದ ಪೊಲೀಸರ ಬಗೆಗೆ ಗೊರೂರರಲ್ಲಿ ಯಾವ ವಿಚಾರವನ್ನು ಕೇಳಿ ತಿಳಿದುಕೊಂಡರು ?<br>***ಉತ್ತರ :***<br>ಅಮೆರಿಕಾದ ಪೊಲೀಸರು ಭಾರತದ ಪೊಲೀಸರ ಸಂಬಳ, ಸಾರಿಗೆ ವಿಚಾರವನ್ನು ಕೇಳಿ ತಿಳಿದುಕೊಂಡರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 17. | ಬಸವಣ್ಣನವರು ಹೇಳಿರುವಂತೆ ದೇವರನ್ನು ಒಲಿಸುವ ಪರಿ ಯಾವುದು ?<br>***ಉತ್ತರ :***<br>ಅಂತರಂಗ ಮತ್ತು ಬಹಿರಂಗ ಶುದ್ಧಿಪಡಿಸಿಕೊಂಡಾಗ ಮಾತ್ರ ದೇವರನ್ನು ಒಲಿಸಿಕೊಳ್ಳಬಹುದು ಎಂದು ಬಸವಣ್ಣನವರು ಹೇಳಿದ್ದಾರೆ. | |
| 18. | ಪುಲಿಗೆರೆ ಸೋಮನಾಥ ಹೇಳಿರುವಂತೆ ಋಷಿಯಲ್ಲಿ ಯಾವ ಗುಣವಿರಬೇಕು ?<br>***ಉತ್ತರ :***<br>ಪುಲಿಗೆರೆ ಸೋಮನಾಥ ಹೇಳಿರುವಂತೆ ಋಷಿಯಲ್ಲಿ ಪರಿಶುದ್ಧವಾದ ಗುಣವಿರಬೇಕು. | |
| 19. | ಮಗನಾದವನು ಹೇಗಿರಬೇಕೆಂದು ಸೋಮೇಶ್ವರ ಶತಕದಲ್ಲಿ ತಿಳಿಸಿದ್ದಾರೆ ?<br>***ಉತ್ತರ :***<br>ಮಗನಾದವನು ವಿನಯವಂತನಾಗಿರಬೇಕೆಂದು ಸೋಮೇಶ್ವರ ಶತಕದಲ್ಲಿ ತಿಳಿಸಿದ್ದಾರೆ. | |
| 20. | ಕೊಡಗಿನ ಗೌರಮ್ಮನವರ ವಿವಾಹವು ಯಾರೊಡನೆ ಆಯಿತು ?<br>***ಉತ್ತರ :***<br>ಕೊಡಗಿನ ಗೌರಮ್ಮನವರ ವಿವಾಹವು ಶುಂಠಿಕೊಪ್ಪದ ಶ್ರೀ ಬಿ.ಟಿ. ಗೋಪಾಲಕೃಷ್ಣಯ್ಯನವರೊಡನೆ ಆಯಿತು. | |
| IV. | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವಿಕೆ.**<br>**(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕ ನೀಡುವುದು) :** | $10 \times 2 = 20$ |
| 21. | ಮಿನಿ ಪೊಲೀಸ್ ನಗರದಲ್ಲಿ ಗೊರೂರರು ದಾರಿ ತಪ್ಪಿಸಿಕೊಂಡ ಬಗೆಯನ್ನು ವಿವರಿಸಿ.<br>***ಉತ್ತರ :***<br>ಗೊರೂರರು ನೋಡಲು ಹೋದ ಮಿತ್ರರು ಇರಲಿಲ್ಲ. ಅವರ ಪರಿಚಿತರು ಸಿಕ್ಕಿ ಮೋಟಾರಿನಲ್ಲಿ ಕೂರಿಸಿಕೊಂಡು ಕೆಲಸದ ಮೇಲೆ ಹೊರಟಾಗ ಅರ್ಧದಾರಿಯಲ್ಲಿ ಇಳಿದ ಗೊರೂರರು ಅದೇ ದಾರಿಯಲ್ಲಿ ಹಿಂದಿರುಗುವಾಗ ಕರೆದುಕೊಂಡು ಹೋಗುವಂತೆ ಪರಿಚತರಿಗೆ ತಿಳಿಸಿದರು. ದೀಪ ಹೊತ್ತಿದ ಮೇಲೆ ನಗರದಲ್ಲಿ ಅಲ್ಲಲ್ಲಿ ಸುತ್ತುತ್ತಾ ಅವರಿಗೆ ಅರಿವಿಲ್ಲದಂತೆ ಬಣ್ಣದ ಬಲ್ಬುಗಳು, ಕಮಾನುಗಳು, ಕಿಟಕಿಗಳು, ದೀಪರಾಶಿ, ಕಿಟಕಿಗಳ ದೀಪಾಲಂಕಾರ ಇವುಗಳನ್ನೆಲ್ಲ ನೋಡುತ್ತಾ ಮಿತ್ರರು ಬಂದು ಕರೆದುಕೊಂಡು ಹೋಗಲು ಗೊತ್ತು ಮಾಡಿದ ಸ್ಥಳ ಮರೆತು ಆಚೆ-ಈಚೆ ಹೊರಟು ಹೋದರು ಹೀಗೆ ಮಿನಿ ಪೊಲೀಸ್‌ನಗರದಲ್ಲಿ ಗೊರೂರರು ದಾರಿ ತಪ್ಪಿಸಿಕೊಂಡರು. | |
| 22. | ಗಾಂಧೀಜಿಯವರು ಗೌರಮ್ಮನವರ ಮನೆಗೆ ಬರಲು ಕಾರಣವೇನು ?<br>***ಉತ್ತರ :***<br>ಗಾಂಧೀಜಿಯವರ ಪರಮ ಅನುಯಾಯಿಯಾಗಿದ್ದ ಗೌರಮ್ಮನವರು ತಮ್ಮ ಇಪ್ಪತ್ತೊಂದನೆಯ ವಯಸ್ಸಿನಲ್ಲಿ ಉಪವಾಸ ಸತ್ಯಾಗ್ರಹ ಮಾಡಿ, ಗಾಂಧೀಜಿಯವರು ನಮ್ಮಂತಹ ಸಾಧಾರಣ ಕುಟುಂಬದವರ ಮನೆಗೂ ಬರಬೇಕೆಂದು ಹಠ ಹಿಡಿದರು. ಕರ್ನಾಟಕ ಪ್ರವಾಸ ಕೈಗೊಂಡು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಕೊಡಗಿನಲ್ಲಿ ಎರಡು ದಿನಗಳ ಕಾಲ ತಂಗಿದ್ದ ಗಾಂಧೀಜಿಯವರು ಕೊಡಗಿನ ಕಿತ್ತಲೆ ಹಣ್ಣು ನೀಡಿ ಗೌರಮ್ಮನವರ ಉಪವಾಸ ಅಂತ್ಯಗೊಳಿಸಿ ಕೊಟ್ಟ ಮಾತಿನಂತೆ ಗೌರಮ್ಮನವರ ಮನೆಗೂ ಬಂದರು. | |
| 23. | ಶರೀಫರು ತಮಗಾದ ದುಃಖವನ್ನು ಕಡಿಮೆ ಮಾಡಿಕೊಂಡ ಬಗೆಯನ್ನು ತಿಳಿಸಿ. | |
| | ***ಉತ್ತರ :*** | |
| | ಮಗಳು ಮತ್ತು ಹೆಂಡತಿಯ ಮರಣದಿಂದ ಧೃತಿಗೆಡದ ಶರೀಫರು ತಮಗಾದ ದುಃಖವನ್ನು ಸಾಧು ಸತ್ಪುರುಷರ ಸಹವಾಸದಿಂದ ಕಡಿಮೆ ಮಾಡಿಕೊಳ್ಳತೊಡಗಿದರು. ದೇವರ ಧ್ಯಾನ ಹಾಗೂ ಉಪಾಸನೆಗಳಲ್ಲಿ ಹೃದಯಕ್ಕಾದ ಪೆಟ್ಟನ್ನು ಮರೆಯಲು ಹವಣಿಸುತ್ತಿದ್ದರು. ಮನೆಯ ಮಗ್ಗುಲಲ್ಲೆ ಒಂದು ಕಟ್ಟೆಯ ಮೇಲೆ ಆಧ್ಯಾತ್ಮ–ಸುಬೋಧ, ಧರ್ಮ–ನೀತಿ ಮಾತುಗಳನ್ನು ಬೋಧಿಸುವ ಹವ್ಯಾಸದಿಂದ ತಮಗಾದ ದುಃಖವನ್ನು ಕಡಿಮೆ ಮಾಡಿಕೊಂಡರು. | |
| 24. | ಕೆಳದಿ ಚೆನ್ನಮ್ಮಳು ತನ್ನ ರಾಜಧಾನಿಯನ್ನು ಭುವನಗಿರಿಗೆ ಏಕೆ ಸ್ಥಳಾಂತರಿಸಿದಳು ? | |
| | ***ಉತ್ತರ :*** | |
| | ಭುವನಗಿರಿಯ ಸುತ್ತಲೂ ಬೆಟ್ಟದಿಂದ ಕೂಡಿದ ಕಣಿವೆ, ಇಕ್ಕಟ್ಟುದಾರಿ, ಕಾಲುದಾರಿ, ಕಳ್ಳದಾರಿಗಳಿಂದ ಕೂಡಿದ ಪ್ರದೇಶವಾಗಿತ್ತು. ಇದರಿಂದ ಮೊಘಲ್ ಸೇನೆ ಸುಲಭವಾಗಿ ದಾಳಿ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಅಲ್ಲದೆ ಮಳೆಗಾಲವಾದ್ದರಿಂದ ಮಲೆನಾಡಿನ ಮಳೆಗೆ ಮೊಘಲ್ ಸೇನೆ ಸಂಕಷ್ಟಕ್ಕೆ ಸಿಲುಕುವಂತೆ ಮಾಡಲು ತನ್ನ ರಾಜಧಾನಿಯನ್ನು ಭುವನಗಿರಿಗೆ ಸ್ಥಳಾಂತರಿಸಿದಳು. | |
| 25. | ಶೋಷಣೆಯನ್ನು ವಿರೋಧಿಸುವವರು ಪಡಬೇಕಾದ ಕಷ್ಟವು 'ಕಟ್ಟತೇವ ನಾವು' ಕವಿತೆಯಲ್ಲಿ ಅಭಿವ್ಯಕ್ತಿಗೊಂಡಿರುವುದನ್ನು ಸಮರ್ಥಿಸಿ. | |
| | ***ಉತ್ತರ :*** | |
| | ಕವಿ ಸತೀಶ ಕುಲಕರ್ಣಿಯವರ ಕಟ್ಟತೇವ ನಾವು ಕವಿತೆಯಲ್ಲಿ ಕ್ರಾಂತಿಕಾರಿಗಳು ಕ್ರಾಂತಿ ಎನ್ನುವ ಕೆಂಡದ ಕುಂಡವನ್ನು ಹೊತ್ತುಕೊಂಡು ಶೋಷಣೆ ಎನ್ನುವ ಮುಳ್ಳು ತುಳಿಯುತ್ತೇವೆ. ಶೋಷಣೆಯ ಮುಳ್ಳು ಚುಚ್ಚಿದರು ರಕ್ತಗಾಲಿನಲ್ಲೇ ನಮ್ಮ ಪಾಲಿನ ಸಮಾನತೆಯ ಕನಸಿನ ಹಾಡನ್ನು ಬರೆಯುತ್ತೇವೆ ಎಂದು ಹೇಳುತ್ತಾ ಶೋಷಣೆಯನ್ನು ವಿರೋಧಿಸುವವರು ಪಡಬೇಕಾದ ಕಷ್ಟವನ್ನು ಅಭಿವ್ಯಕ್ತಗೊಳಿಸಿದ್ದಾರೆ. | |
| 26. | ಬಣ್ಣ ಬೇರೆಯಾದರೂ ಜೀವರಸ ಒಂದೇ ಎಂಬ ಭಾವನೆ 'ಭೂಮಿತಾಯ ಕುಡಿಗಳು' ಕವನದಲ್ಲಿ ಹೇಗೆ ವ್ಯಕ್ತವಾಗಿದೆ ? | |
| | ***ಉತ್ತರ :*** | |
| | ಕವಿ ಕೆ.ಎಸ್. ನಿಸಾರ್ ಅಹಮದ್‌ರವರು ಭೂಮಿತಾಯಿ ಮಕ್ಕಳಾದ ನಾವೆಲ್ಲರೂ ಒಂದೇ ಎಂದಿದ್ದಾರೆ. ಆಂಗ್ಲರು ಮತ್ತು ಆಫ್ರಿಕನ್ನರ ಬಣ್ಣ ಸಂಸ್ಕೃತಿ ಬೇರೆ ಬೇರೆ ಆದರೂ ಅವರಲ್ಲಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಹರಿವ ನೆತ್ತರ ಬಣ್ಣ ಒಂದೇ ಆಗಿರುತ್ತದೆ. ಹಸಿವು ನೀಗಿಸುವ ಅಕ್ಕಿ ಮತ್ತು ರಾಗಿಯ ಬಣ್ಣ ಬಿಳಿದು ಕರಿದು ಆಗಿದ್ದರೂ ಅವುಗಳನ್ನು ಬೆಳೆಯುವ ಹುಲ್ಲಿನ ಬಣ್ಣ ಒಂದೇ ಆಗಿರುತ್ತದೆ. ಹೀಗೆ ಬಣ್ಣ ಬೇರೆಯಾದರೂ ಜೀವರಸ ಒಂದೇ ಎಂಬ ಭಾವನೆ 'ಭೂಮಿತಾಯ ಕುಡಿಗಳು' ಕವನದಲ್ಲಿ ವ್ಯಕ್ತವಾಗಿದೆ. | |
| 27. | ರೈತನು ದನಕರುಗಳು ಹೇಗಾಗಿವೆ ಎಂದು ಮಳೆರಾಯನಲ್ಲಿ ನಿವೇದಿಸುತ್ತಾನೆ ?<br>***ಉತ್ತರ :***<br>ರೈತರಿಗೆ ಕೃಷಿಯೆ ಪ್ರಧಾನವಾದುದು. ಮಳೆಬಾರದೆ ಹೋದರೆ ಅವರು ದೇವರಲ್ಲಿ ಮೊರೆ ಇಡುವ ರೀತಿಯನ್ನು ತಿಳಿಸಲಾಗಿದೆ. ಅಪ್ಪ ಮಳೆರಾಯ ರಕ್ಷಿಸುವವರಿಲ್ಲದೆ ಈ ಭೂಮಿಯು ಬರಡಾಗಿ ಹೋಗಿದೆ. ದನಕರುಗಳು ಕೂಡ ಮೇವಿಲ್ಲದೆ ಸೊರಗಿ ದಂಟಿನಂತಾಗಿವೆ. ಆದ್ದರಿಂದ ನೀನು ಬಂದು ಈ ಭೂಮಿ ಮತ್ತು ದನಕರುಗಳಿಗೆ ರಕ್ಷಣೆ ನೀಡು ಎಂದು ರೈತನು ಮಳೆರಾಯನಲ್ಲಿ ನಿವೇದಿಸುತ್ತಾನೆ. | |
| 28. | ಧರ್ಮಪದನಿಗೆ ವಿಷ ಉಣಿಸಲು ಶಿಲ್ಪಿ ಪ್ರಯತ್ನಿಸಿದ್ದೇಕೆ ?<br>***ಉತ್ತರ :***<br>ಧರ್ಮಪದನು ಚಿಕ್ಕವಯಸ್ಸಿಗೆ ಯಾರೂ ಕೂಡಿಸಲಾಗದ ಕಲಶ ಕೂಡಿಸಿಬಿಟ್ಟನಲ್ಲ ಎಂದು ತಿಳಿದು "ಇಷ್ಟು ಚಿಕ್ಕವಯಸ್ಸಿನಲ್ಲಿ ಎಂಥಾ ಪ್ರತಿಭೆ ಇವನಿಗೆ! ಇವನನ್ನು ಬೆಳೆಯಲು ಬಿಡಬಾರದು. ತಮ್ಮ ಸಾಧನೆ ಇವನ ಪ್ರತಿಭೆಯ ಮುಂದೆ ಸಣ್ಣದಾಗುವುದು ಬೇಡ. ಈಗಲೇ ಇವನನ್ನು ಮುಗಿಸಿಬಿಡಬೇಕು ಎಂದು ಆಲೋಚಿಸಿ ಶಿಲ್ಪಿಯು ಧರ್ಮಪದನಿಗೆ ವಿಷ ಉಣಿಸಲು ಪ್ರಯತ್ನಿಸಿದನು. | |
| 29. | ತುಳಜಾಬಾಯಿಯ ದೇಶಪ್ರೇಮ ಮತ್ತು ತ್ಯಾಗವನ್ನು ಕುರಿತು ಬರೆಯಿರಿ.<br>***ಉತ್ತರ :***<br>ರಾಮ್‌ಸಿಂಗ್‌ನ ತಾಯಿಯಾದ ತುಳಜಾಬಾಯಿಯು ಮಗನನ್ನು ಬಲಿಕೊಡುವ ಸಾಧ್ಯತೆಯ ಅರಿವಿದ್ದರೂ ಧೈರ್ಯತಂದುಕೊಂಡಳು. ಒಂದು ವರ್ಷದ ಹಿಂದಷ್ಟೆ ಈ ಹೋರಾಟದಲ್ಲಿ ತನ್ನ ಪತಿಗತಿಸಿದ್ದರೂ ಲೆಕ್ಕಿಸದೆ ತನ್ನ ಮಗನನ್ನು ಆಶೀರ್ವದಿಸಿ ಮೋಹನಪುರದಲ್ಲಿನ ಹೋರಾಟಕ್ಕೆ ಶುಭಕೋರಿ ಕಳುಹಿಸಿ ಕೊಡುತ್ತಾಳೆ. ಹಾಗೆಯೆ ರಾಮ್‌ಸಿಂಗ್‌ನ ಹತ್ಯೆಯ ಸ್ಥಳಕ್ಕೆ ಬಂದು ಹತ್ಯೆಗೊಳಗಾದ ತನ್ನ ಮಗ ರಾಮ್‌ಸಿಂಗ್‌ನಿಗೆ ಧ್ವಜ ನೀಡಲು ಮುಂದಾಗುತ್ತಾಳೆ. ಕುಲಕರ್ಣಿಯು ಧ್ವಜವನ್ನು ಕೆಳಗಿಡು ಎಂದಾಗ ಹೊಟ್ಟೆಯಲ್ಲಿ ಹುಟ್ಟಿದ ಮಗನನ್ನೇ ಬಲಿಕೊಟ್ಟಿರುವೆ ನನ್ನ ಪ್ರಾಣವನ್ನು ತ್ಯಜಿಸಲು ನಾನು ಸಿದ್ಧಳಿದ್ದೇನೆ ಆದರೆ ಈ ಧ್ವಜವನ್ನು ಕೆಳಗಿಡಲಾರೆ ಎಂದು ಹೇಳುತ್ತಾ ದೇಶಪ್ರೇಮವನ್ನು ತೋರುತ್ತಾಳೆ. | |
| 30. | ಮಹಾಶಿಲ್ಪಿ ವಿಶುವಿಗೆ ಧರ್ಮಪದನು ನೀಡಿದ ಆಶ್ವಾಸನೆಯೇನು ?<br>***ಉತ್ತರ :***<br>ಧರ್ಮಪದನು ಮಹಾಶಿಲ್ಪಿ ವಿಶುವಿಗೆ "ಮಹಾಶಿಲ್ಪಿಗಳೇ! ದೇವಾಲಯದ ಕಲಶವನ್ನು ನಾನು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ನಿಲ್ಲಿಸಬಲ್ಲೆ. ಅನುಮಾನ ಬೇಡ ಅವಕಾಶ ಕೊಟ್ಟು ನೋಡಿ. ಪ್ರಯತ್ನಕ್ಕೆ ಜಯ ಖಂಡಿತ. ನಿಮ್ಮ ನಿಟ್ಟುಸಿರು ನೀಗುವಂತೆ ಮಾಡುತ್ತೇನೆ. ದಯಮಾಡಿ ಅಲಕ್ಷಿಸಬೇಡಿ" ಎಂದು ಆಶ್ವಾಸನೆ ನೀಡಿದನು. | |
| V. | **ಸಂದರ್ಭಸಹಿತ ವಿವರಣೆ :** | 4 × 3 = 12 |
| | ಪದ್ಯದ ಹೆಸರು, ಕೃತಿ, ಕರ್ತೃ | 1 ಅಂಕ |
| | ಯಾರು-ಯಾರಿಗೆ, ಸಂದರ್ಭ ವಿವರಣೆಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | "ದೊರಕಿದಾ ಗುರು ದೊರಕಿದಾ ಸದ್ಗುರು."<br>***ಉತ್ತರ :***<br>***ಆಯ್ಕೆ :*** ಈ ಮಾತನ್ನು ಆರ್.ಎಸ್. ಸುಂಕದರವರ 'ಶ್ರೀ ಶಿಶುನಾಳ ಶರೀಫ ಸಾಹೇಬರ ಅನುಭಾವ ಗೀತ ಮಂಜರಿ' ಕೃತಿಯಿಂದ ಆರಿಸಲಾದ 'ಶಿಶುನಾಳ ಶರೀಫ ಸಾಹೇಬರು' ಎಂಬ ಪಾಠದಿಂದ ಆರಿಸಲಾಗಿದೆ.<br>***ಹೇಳಿಕೆ :*** ಶಿಶುನಾಳ ಶರೀಫ ಸಾಹೇಬರು ತಮ್ಮ ಗುರುಗಳಾದ ಗೋವಿಂದಭಟ್ಟರ ಕುರಿತು ಈ ಮಾತನ್ನು ಹೇಳಿದ್ದಾರೆ.<br>***ಸಂದರ್ಭ :*** ಉದಾರ ಸಹೃದಯಿಗಳಾದ ಗೋವಿಂದಭಟ್ಟರು ಮಾನವಕುಲ ಒಂದೇ ಎಂಬ ಭಾವನೆಯುಳ್ಳವರಾಗಿದ್ದರು. ಸ್ವಜಾತಿಯನಲ್ಲದ ಮುಸಲ್ಮಾನ ಶಿಷ್ಯನಿಗೆ ವಿದ್ಯಾದಾನ ಮಾಡಿದರು ಎಂದು ಹೇಳುವಾಗ ಅಸಮ ತೇಜೋರೂಪ ಕಿರಣದೊಳಗೆ ಬಂದು, ದೊರಕಿದಾ ಗುರು ದೊರಕಿದ ಸದ್ಗುರು ಎಂದು ಹೇಳಿದ್ದಾರೆ.<br>***ಸ್ವಾರಸ್ಯ :*** ಜ್ಞಾನಿಗಳು, ವಿದ್ಯಾವಂತರು, ನಗೆಮೊಗದ ಪ್ರಸಾದವಾಣಿಯ ದಿವ್ಯ ವ್ಯಕ್ತಿಗಳಾದ ತಮ್ಮ ಗುರುಗಳಾದ ಗೋವಿಂದಭಟ್ಟರು ತಮಗೆ ಹೇಗೆ ದೊರಕಿದರು ಎಂಬ ಭಾವನೆಯನ್ನು ವ್ಯಕ್ತಪಡಿಸಿರುವುದು ಇಲ್ಲಿ ಸ್ವಾರಸ್ಯಕರವಾಗಿದೆ. | |
| 32. | "ಸಾವಿರಾರು ಕೆರೆ ತುಂಬಿ."<br>***ಉತ್ತರ :***<br>***ಆಯ್ಕೆ :*** ಈ ಸಾಲನ್ನು ಜನಪದ ಸಾಹಿತ್ಯದ 'ಜನಪದಗೀತೆ' ಎಂಬ ಪದ್ಯದಿಂದ ಆರಿಸಲಾಗಿದೆ.<br>***ಹೇಳಿಕೆ :*** ಜಾನಪದರು ಮಳೆಯನ್ನು ಕುರಿತು ಈ ಮಾತನ್ನು ಹೇಳಿದ್ದಾರೆ.<br>***ಸಂದರ್ಭ :*** ಸ್ವಾತಿ ಮಳೆ ಸುರಿದಾಗ ಸಾವಿರಾರು ಕೆರೆಗಳು ತುಂಬಿ ಕೆರೆಗಳಲ್ಲಿ ಮೀನುಗಳು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಜೋತಾಡುತ್ತವೆ. ಅಲ್ಲದೆ ಕುಣಿಗಲ್ ಕೆರೆಯ ಕುಚ್ಚಲ ಮೀನು ಸಂತೋಷದಿಂದಿರುತ್ತವೆ ಎಂದು ಹೇಳಿದ್ದಾರೆ. | |
| | ***ಸ್ವಾರಸ್ಯ :*** ರೈತರ ಮೊರೆಗೆ ಮಳೆಸುರಿದು ಸಾವಿರಾರು ಕೆರೆಗಳು ತುಂಬಿ ಕೆರೆಗಳಲ್ಲಿ ಮೀನುಗಳು ಸಂತೋಷದಿಂದ ಇರುತ್ತವೆ. ರೈತರು ಖುಷಿಯಾಗಿ ಕೆರೆ ನೀರನ್ನು ಬಳಸಿ ಕೃಷಿ ಮಾಡುತ್ತಾರೆ ಎಂಬುದೇ ಇಲ್ಲಿ ಸ್ವಾರಸ್ಯವಾಗಿರುತ್ತದೆ. | |
| 33. | "ತಾಯಿ ಎಂದು ಕರೆದ ಕನ್ನಡದ ಕಂದ ಯಾರು ?" | |
| | ***ಉತ್ತರ :*** | |
| | ***ಆಯ್ಕೆ :*** ಈ ಮಾತನ್ನು ವಿಜಯಲಕ್ಷ್ಮಿ ಬಾಳೇಕುಂದ್ರಿಯವರ 'ಜೀವನಧಾರೆ' ಕೃತಿಯ 'ಕರ್ನಾಟಕದ ವೀರ ವನಿತೆಯರು' ಎಂಬ ಪಾಠದಿಂದ ಆರಿಸಲಾಗಿದೆ. | |
| | ***ಹೇಳಿಕೆ :*** ಸೆರೆಮನೆಯಲ್ಲಿದ್ದ ರಾಣಿ ಚೆನ್ನಮ್ಮಳು ಸಂಗೊಳ್ಳಿ ರಾಯಣ್ಣನಿಗೆ ಈ ಮಾತನ್ನು ಹೇಳಿದಳು. | |
| | ***ಸಂದರ್ಭ :*** ಬ್ರಿಟಿಷರು ಚೆನ್ನಮ್ಮಳ ಹಿತಶತ್ರುಗಳೊಂದಿಗೆ ಪಿತೂರಿ ನಡೆಸಿ ಮದ್ದಿನಲ್ಲಿ ಸೆಗಣಿ ಸೇರಿಸಿ ರಾಣಿ ಚೆನ್ನಮ್ಮಳ ತೋಪು ಹಾರದಂತೆ ಮೋಸ ಮಾಡಿ ಅವಳನ್ನು ಸೆರೆಯಲ್ಲಿಟ್ಟಾಗ. ಸೆರೆಮನೆಯಲ್ಲಿ ಸಂಧಿಸಲು ಬಂದ ಸಂಗೊಳ್ಳಿ ರಾಯಣ್ಣ 'ತಾಯಿ' ಎಂದು ಕರೆದಾಗ ರಾಣಿ ಚೆನ್ನಮ್ಮಳು ಈ ರೀತಿ ಹೇಳಿದ್ದಾಳೆ. | |
| | ***ಸ್ವಾರಸ್ಯ :*** ಸೆರೆಯಾಳುಗಳನ್ನು, ಮಹಿಳೆ ಮತ್ತು ಮಕ್ಕಳನ್ನು ಅಕ್ಕರೆಯಿಂದ ಕಂಡ ಕರುಣಾಮಯಿ. ವೀರರಾಣಿ ಸೆರೆಮನೆಯಲ್ಲಿದ್ದರೂ 'ತಾಯಿ' ಎಂದು ಕರೆದಾಗ ಹರ್ಷಗೊಂಡು ಹೇಳಿರುವುದು ಇಲ್ಲಿ ವ್ಯಕ್ತವಾಗಿದೆ. | |
| 34. | "ಒಡೆದ ಮನಸುಗಳ ಕಂಡ ಕನಸುಗಳ ಕಟ್ಟೇ ಕಟ್ಟತೇವ." | |
| | ***ಉತ್ತರ :*** | |
| | ***ಆಯ್ಕೆ :*** ಈ ವಾಕ್ಯವನ್ನು 'ಸತೀಶ ಕುಲಕರ್ಣಿ'ಯವರ 'ಕಟ್ಟತೇವ ನಾವು' ಎಂಬ ಪದ್ಯದಿಂದ ಆರಿಸಲಾಗಿದೆ. | |
| | ***ಹೇಳಿಕೆ :*** ಕವಿ ಸತೀಶ ಕುಲಕರ್ಣಿಯವರು ಕನಸಿನ ನಾಡಿನ ಕುರಿತು ಹೇಳುವಾಗ ಹೇಳಿದ ಮಾತು. | |
| | ***ಸಂದರ್ಭ :*** ಸಮಾಜ ತಾರತಮ್ಯಗಳಿಂದ ಕೂಡಿರುವುದನ್ನು ಮನಗಂಡ ಸತೀಶ ಕುಲಕರ್ಣಿಯವರು ನಾವೆಲ್ಲರೂ ಒಂದೇ ಎನ್ನುವ ನಾಡನ್ನು ಕಟ್ಟುತ್ತೇವೆ ಎಂದಿದ್ದಾರೆ. ತಾರತಮ್ಯದಿಂದ ಒಡೆದ ಮನಸುಗಳನ್ನು ಕಂಡ ಕನಸುಗಳನ್ನು ಮತ್ತೆ ಕಟ್ಟುತೇವೆ ಎಂದು ಹೇಳಿದ್ದಾರೆ. | |
| | ***ಸ್ವಾರಸ್ಯ :*** ಸಮಾಜದಲ್ಲಿರುವ ತಾರತಮ್ಯಗಳಿಂದ ಮನಸುಗಳು ಒಡೆದು ಹೋಗಿವೆ. ಒಡೆದ ಮನಸುಗಳ ಮತ್ತು ಸಮಾನತೆಯ ಕನಸು ಕಟ್ಟುತ್ತೇವೆ ಎಂಬುದು ಇಲ್ಲಿ ವ್ಯಕ್ತವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| VI. | **ಐದು-ಆರು ವಾಕ್ಯಗಳಲ್ಲಿ ಉತ್ತರಿಸುವುದು :** | 4 × 3 = 12 |
| | ವಿಷಯಕ್ಕೆ | 2 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 35. | ಮಿನಿ ಪೊಲೀಸ್ ನಗರದಲ್ಲಿ ಎದುರಾದ ಸಮಸ್ಯೆಯಿಂದ ಗೊರೂರರು ಪಾರಾದುದು ಹೇಗೆ ? ವಿವರಿಸಿ.<br>***ಉತ್ತರ :***<br>ಗೊರೂರರು ಮಿನಿ ಪೊಲೀಸ್ ನಗರದಲ್ಲಿ ಸುತ್ತುತ್ತಾ ಪರಿಚಿತರು ಗೊತ್ತು ಮಾಡಿದ ಸ್ಥಳ ಮರೆತುಬಿಟ್ಟರು. ಇವರು ಹೋಟೆಲ್‌ನಲ್ಲಿ ಉಳಿದುಕೊಳ್ಳಲು ಸಾಕಷ್ಟು ಹಣವೂ ಇರಲಿಲ್ಲ. ಅಲ್ಲೇ ಎಲ್ಲಾದರು ಮಲಗಿಕೊಂಡರೆ ಅಲೆಮಾರಿಗಳೆಂದು ಜೈಲಿಗೆ ಹಾಕುತ್ತಾರೆ. ಹೀಗೆ ಅಲೆಯುತ್ತಿರುವಾಗ ಟ್ರಾಫಿಕ್ ಪೊಲೀಸರಿಗೆ ತನ್ನ ಸಮಸ್ಯೆಯನ್ನು ವಿವರಿಸಿದರು. ಗೊರೂರರ ಸಮಸ್ಯೆಯನ್ನು ಅರ್ಥಮಾಡಿಕೊಂಡ ಟ್ರಾಫಿಕ್ ಪೊಲೀಸ್‌ನವನು "ಈಗ ನೀವು ನನ್ನ ವಶವಾದಿರಿ. ನಾನು ನಿಮ್ಮನ್ನು ಕೈಬಿಡುವಂತಿಲ್ಲ. ನನ್ನ ಮನೆಗೆ ಹೋಗೋಣ ನಡೆಯಿರಿ" ಎಂದು ತನ್ನ ಮನೆಗೆ ಕರೆದುಕೊಂಡು ಹೋದರು. ಅಲ್ಲಿ ಬ್ರೆಡ್, ಹಾಲು, ಹಣ್ಣು ಮತ್ತು ಬಿಸ್ಕತ್‌ಗಳನ್ನು ನೀಡಿದರು. ಅಲ್ಲದೆ ತನ್ನ ವಶದಲ್ಲೇ ಇದ್ದ ಗಾಳಿ ಬೆಳಕು ಸ್ವಚ್ಛವಾದ ಹಾಸಿಗೆ ವಾರಕ್ಕೆರಡು ಸಲ ಕ್ರಿಮಿನಾಶಕ ಸಾರಣೆ ಮಾಡಿದ ಲಾಕಪ್‌ನಲ್ಲಿ ಮಲಗಲು ಅವಕಾಶ ಮಾಡಿಕೊಟ್ಟರು. ಗೊರೂರರಿಗೆ ಸೊಗಸಾದ ನಿದ್ರೆ ಬಂತು ಬೆಳಗಾದ ನಂತರ ಮಿತ್ರರ ಮನೆಯೂ ದೊರಕಿತು. ಹೀಗೆ ಮಿನಿ ಪೊಲೀಸ್ ನಗರದಲ್ಲಿ ಎದುರಾದ ಸಮಸ್ಯೆಯಿಂದ ಲೇಖಕರು ಪಾರಾದರು. | |
| 36. | 'ಕೊಡಗಿನ ಗೌರಮ್ಮನವರು ಆ ಕಾಲದ ಮಹಿಳಾ ಸದಭಿರುಚಿಯ ದ್ಯೋತಕವಾಗಿದ್ದರು' ಈ ಹೇಳಿಕೆಯನ್ನು ಸಮರ್ಥಿಸಿ.<br>***ಉತ್ತರ :***<br>ಗೌರಮ್ಮನವರು ಆರೋಗ್ಯಕರ ನಿಲುವಿನ, ಜಾತ್ಯಾತೀತ ಮನೋಧರ್ಮದ ಮಾನವೀಯ ವಿಚಾರಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದ ಅಪಾರ ಜೀವನ ಪ್ರೀತಿಯ ಕತೆಗಾರ್ತಿಯಾಗಿದ್ದರು. ಭಾರತೀಯ ಸಮಾಜದಲ್ಲಿ ಮಹಿಳೆಯರು ತಮ್ಮದೇ ಆದ ಸಂಕೋಲೆಗಳು ಮತ್ತು ನಿಸ್ಸಹಾಯಕತೆಯ ಇಕ್ಕಟ್ಟಿನಲ್ಲಿ ನರಳುತ್ತಿರುವ ರೀತಿಯನ್ನು ಗ್ರಹಿಸಿ. ಸಮಾಜದಲ್ಲಿನ ಕ್ರೌರ್ಯದ ನಾನಾ ಮುಖಗಳ ಸೂಕ್ಷ್ಮವಾದ ಅನಾವರಣವನ್ನು ತಮ್ಮ ಕಥೆಗಳಲ್ಲಿ ಮಾಡಿದರು. ಬದುಕಿನ ಬಗ್ಗೆ ಕಾಳಜಿಗಳನ್ನು ಹೊಂದಿದ್ದ ಗೌರಮ್ಮ ಆ ಕಾಲದ ಮಹಿಳಾ ಸದಭಿರುಚಿಯ ದ್ಯೋತಕವಾಗಿದ್ದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 37. | ನಿಸಾರ್ ಅಹಮದ್‌ರವರು ನಾವೆಲ್ಲರೂ ಭೂಮಿತಾಯಿಯ ಕುಡಿಗಳೆಂದು ಏಕೆ ಪಣ ತೊಡಬೇಕೆಂದು ಹೇಳಿದ್ದಾರೆ ?<br>***ಉತ್ತರ :***<br>ಪ್ರಕೃತಿಯಲ್ಲಿ ಅಪಾರ ವೈವಿದ್ಯತೆ ಇದ್ದರೂ ಒಳಗೆ ಸಾಮರಸ್ಯ ಇರುವಂತೆ ಭೂಮಿತಾಯ ಮಕ್ಕಳಾದ ನಾವೆಲ್ಲರೂ ಒಂದೇ ಎಂದು ಹೇಳಿದ್ದಾರೆ. ವ್ಯಕ್ತಿಯ ಸ್ವರೂಪ ಹಾಗೂ ಸ್ವಭಾವಗಳು ಬೇರೆ ಆದರೂ ಎಲ್ಲರೂ ತಾಯ ಬಸಿರಿನಿಂದಲೇ ಜನಿಸಿದ್ದೇವೆ. ಹಿಂದೂ, ಕ್ರೈಸ್ತ, ಮುಸ್ಲಿಂ ಧರ್ಮಗಳು ಬೇರೆಯಾದರು ಅವುಗಳ ಸಂದೇಶ ಒಂದೇ ಆಗಿರುತ್ತದೆ. ಆಂಗ್ಲರು ಮತ್ತು ಆಫ್ರಿಕನ್ನರು ಬೇರೆಯಾದರೂ ಅವರಲ್ಲಿ ಹರಿವ ನೆತ್ತರು ಒಂದೇ ಬಣ್ಣ ಹೊಂದಿರುತ್ತದೆ. ಅಕ್ಕಿ ರಾಗಿ ಬಿಳಿದು ಕರಿದು ಆಗಿದ್ದರೂ ಅವುಗಳನ್ನು ಬೆಳೆಯುವ ಹುಲ್ಲಿನ ಬಣ್ಣ ಒಂದೇ ಆಗಿರುತ್ತದೆ. ಬಾಣ, ಬಿರುಸು, ಕುಂಡ, ಹಣತೆ ಇವು ಬೇರೆಯಾದರೂ ಇವುಗಳು ಬೀರುವ ಬೆಳಕು ಒಂದೇ ಆಗಿರುತ್ತದೆ. ಕಂದಪದ್ಯ, ವೃತ್ತ, ತ್ರಿಪದಿ, ವಚನಗಳು ಬೇರೆ ಆದರೂ ಇವುಗಳ ಸಾರ ಒಂದೇ ಆಗಿರುತ್ತದೆ. ಕರ್ನಾಟಕ, ಬಂಗಾಳ, ಆಂಧ್ರಪ್ರದೇಶ ಬೇರೆ ಬೇರೆ ಆದರೂ ನಾವೆಲ್ಲರೂ ಭಾರತೀಯರೇ ಆಗಿದ್ದೇವೆ. ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ಬೇರೆ ಆದರೂ ಇಲ್ಲಿ ಬೀಸುವ ಗಾಳಿ, ಬೆಳಕು ಎಲ್ಲವೂ ಒಂದೇ ಆಗಿರುತ್ತದೆ. ಆದ್ದರಿಂದ ನಾವೆಲ್ಲರೂ ಭೂಮಿತಾಯ ಕುಡಿಗಳೆಂದು ಪಣ ತೊಡಬೇಕೆಂದು ಹೇಳಿದ್ದಾರೆ. | |
| 38. | ಬಸವಣ್ಣನವರ ವಚನಗಳಲ್ಲಿ ಕಂಡುಬರುವ ಮಾನವೀಯ ಮೌಲ್ಯಗಳನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.<br>***ಉತ್ತರ :***<br>ಬಸವಣ್ಣನವರು ರಚಿಸಿದ ವಚನ ಸಾಹಿತ್ಯ ಸಮಾಜದ ಕನ್ನಡಿಯಾಗಿದೆ. ಮಾನವನು ಕಳ್ಳತನ ಮಾಡದೆ, ಹಿಂಸೆ ಮಾಡದೆ, ಸುಳ್ಳು ಹೇಳದೆ, ಕೋಪಿಸಿಕೊಳ್ಳದೆ, ಅನ್ಯರನ್ನು ಕಂಡು ಅಸಹ್ಯಪಡದೆ ತನ್ನನ್ನು ತಾನು ಹೊಗಳಿಕೊಳ್ಳದೆ, ಬೇರೆಯವರನ್ನು ಹೀಯಾಳಿಸದೆ. ಪರಸ್ಪರ ಸ್ನೇಹ, ಪ್ರೀತಿ, ಮಮತೆ ಸಹಕಾರ ಸಂಬಂಧಗಳಿಂದ ಬಾಳಬೇಕು. ಮಾನವಲೋಕ, ದೇವಲೋಕ ಎಂಬುದು ಎಲ್ಲೂ ಇಲ್ಲ ಒಳ್ಳೆಯ ನಡವಳಿಕೆ ಹೊಂದಿದ್ದರೆ ಅದೇ ಸ್ವರ್ಗ, ಕೆಟ್ಟ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ನಡವಳಿಕೆ ಹೊಂದಿದ್ದರೆ ಅದನ್ನು ನರಕ ಎಂಬ ಕಲ್ಪನೆಯನ್ನು ತಿಳಿಸಿದ್ದಾರೆ. ಹೀಗೆ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಂಡಾಗ ಮನುಷ್ಯರು ಪರಿಶುದ್ಧರಾಗಿ ದೈವಕೃಪೆಗೆ ಪಾತ್ರರಾಗುತ್ತಾರೆ ಎಂದು ಬಸವಣ್ಣನವರ ವಚನಗಳಲ್ಲಿ ತಿಳಿಸಲಾಗಿದೆ. | |
| VII. | **ಕವಿಗಳ / ಸಾಹಿತಿಗಳ ಕಾಲ, ಜನ್ಮಸ್ಥಳ, ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | $2 \times 3 = 6$ |
| | ಜನ್ಮಸ್ಥಳ, ಕಾಲಕ್ಕೆ | 1 ಅಂಕ |
| | ಕೃತಿಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 39. | ವಿಜಯಲಕ್ಷ್ಮಿ ಬಾಳೇಕುಂದ್ರಿ :<br>***ಉತ್ತರ :***<br>ವಿಜಯಲಕ್ಷ್ಮಿ ಬಾಳೇಕುಂದ್ರಿಯವರು ೧೯೫೦ ಆಗಸ್ಟ್ ೬ರಂದು ಬೆಳಗಾವಿಯಲ್ಲಿ ಜನಿಸಿದರು. ಇವರ ಕೃತಿಗಳು 'ಸಮಾಜ ವಿಕಾಸಕ್ಕೆ ಶರಣ ಸಂಸ್ಕೃತಿ', 'ಜೀವನ್ಮುಕ್ತಿ', 'ಚಿಣ್ಣರ ಚಿತ್ತಾರ', 'ಚಿಣ್ಣರ ಚಿಲಿಪಿಲಿ', 'ಜೀವನಧಾರೆ' ಇವರಿಗೆ ರಾಜ್ಯೋತ್ಸವ ಪ್ರಶಸ್ತಿ ಮತ್ತು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. | |
| 40. | ಸತೀಶ ಕುಲಕರ್ಣಿ :<br>***ಉತ್ತರ :***<br>ಸತೀಶ ಕುಲಕರ್ಣಿಯವರು ೧೯೫೧ ರ ಜುಲೈ ೭ ರಂದು ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಗುಡಗೇರಿಯಲ್ಲಿ ಜನಿಸಿದರು. ಇವರ ಕೃತಿಗಳು 'ಬೆಂಕಿ ಬೇರು', 'ನೆಲದ ನೆರಳು', 'ವಿಕ್ಷಿಪ್ತ', 'ಒಡಲಾಳ ಕಿಚ್ಚು', 'ವಿಷಾದಯೋಗ', 'ಗಾಂಧೀಗಿಡ', 'ಕಂಪನಿ ಸವಾಲ್', 'ಭಿನ್ನ', 'ಸಮುದ್ರ ಸೂರ್ಯ', 'ಗುರುವರ್ಯ ಗೋಕಾಕರು', 'ಒಡೊಳಗಿನ ಒದು'. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| VIII. | **ಗಾದೆಯ ಮಾತನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 3 = 3 |
| 41. | ಹಾಸಿಗೆ ಇದ್ದಷ್ಟು ಕಾಲು ಚಾಚು.<br>**ಅಥವಾ**<br>ಕೈ ಕೆಸರಾದರೆ ಬಾಯಿ ಮೊಸರು. | |
| | ಗಾದೆಯ ಮಹತ್ವ | 1 ಅಂಕ |
| | ಗಾದೆಯ ಅರ್ಥ / ವಿವರಣೆ | 1 ಅಂಕ |
| | ಭಾಷಾಶೈಲಿಗೆ / ಉದಾಹರಣೆಗೆ | 1 ಅಂಕ |
| | ಒಟ್ಟು | 3 ಅಂಕಗಳು |
| IX. | **ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | 1 × 4 = 4 |
| | ವಿಷಯಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 42. | ರಾಮಸಿಂಗನು ತನ್ನ ಛಲವನ್ನು ಹೇಗೆ ಸಾಧಿಸಿದನು ? ವಿವರಿಸಿ.<br>**ಅಥವಾ**<br>ಸೋಮಣ್ಣನು ಕುಲಕರ್ಣಿಯ ಕೃತ್ಯವನ್ನು ಹೇಗೆ ಖಂಡಿಸಿದನು ? ವಿವರಿಸಿ.<br>***ಉತ್ತರ :***<br>ಮೋಹನಪುರದಲ್ಲಿ ಚಳುವಳಿಯನ್ನು ನಡೆಸಲು ರಾಮ್‌ಸಿಂಗ್‌ನು ಸೇರಿದಂತೆ ಅನೇಕ ಸ್ವಯಂ ಸೇವಕರು ಸೇರಿದ್ದರು. ಅಷ್ಟರಲ್ಲಿ ಅಲ್ಲಿಗೆ ಬಂದ ಸಿಪಾಯಿಗಳು ಸಭೆ ಸೇರಕೂಡದೆಂದು ತಿಳಿಸಿದರು. ಅದಕ್ಕೆ ರಾಮ್‌ಸಿಂಗ್‌ನು ಇದು ನಿಮ್ಮಪ್ಪನ ಮನೆಯಲ್ಲ ಇದು ನಮ್ಮ ಊರು ಎಂದು ಪ್ರತಿಕ್ರಿಯಿಸಿದಾಗ ಅಲ್ಲಿಗೆ ಬಂದ ಕುಲಕರ್ಣಿ ಇಲ್ಲಿ ಬ್ರಿಟಿಷ್ ಆಡಳಿತ ನಡೆಸಲು ನಮಗೆ ಆಜ್ಞೆ ಆಗಿದೆ ಎಂದನು. ಬ್ರಿಟಿಷರ ಅಧಿಕಾರ ಇನ್ನು ಮುಂದೆ ನಡೆಯುವುದಿಲ್ಲ ಎಂದು ಸಾರಲು ಸಭೆ ಸೇರಿದ್ದೇವೆ ಎಂದು ರಾಮ್‌ಸಿಂಗ್ ಹೇಳಿದನು. ಕುಲಕರ್ಣಿಯು ಎಷ್ಟು ಉದ್ದಟನಾಗಿದ್ದೀಯಾ ಎಂದಾಗ ಸಿಪಾಯಿಯೂ ಯಾರ ಎದುರು ಮಾತನಾಡುತ್ತೀ ಎಂಬ ಎಚ್ಚರಿಕೆ ಇರಲಿ ಎಂದಾಗ ರಾಮ್‌ಸಿಂಗ್ ನೀವು ಬ್ರಿಟಿಷರ ಗುಲಾಮರು ಎನ್ನುವನು. ಕುಲಕರ್ಣಿಯು ಸುಮ್ಮನೆ ಇಲ್ಲಿಂದ ಹೊರಟುಹೋಗಿರಿ ಎಂದು ಪಿಸ್ತೂಲು ತೋರಿಸುವನು. ಅದಕ್ಕೆ ಪ್ರತಿಯಾಗಿ ರಾಮ್‌ಸಿಂಗ್‌ನು ನನ್ನ ಕೈಯಲ್ಲಿ ಏನಿದೆ ನೋಡಿದಿರಾ ಎಂದು ರಾಷ್ಟ್ರ ಧ್ವಜ ಎತ್ತಿ ತೋರಿಸುವನು. ಕುಲಕರ್ಣಿಯು ಪಿಸ್ತೂಲು ತೋರಿಸಿ ಸುಮ್ಮನೆ ರಾಷ್ಟ್ರಧ್ವಜವನ್ನು ಕೆಳಗಿಡುವಂತೆ ಹೇಳಿದನು. ಅದಕ್ಕೆ ರಾಮ್‌ಸಿಂಗ್‌ನು ಈ ದೇಹದಲ್ಲಿ ಪ್ರಾಣವಿರುವವರೆಗೆ ಇದನ್ನು ಕೆಳಗಿಡಲಾರೆ "ಮಾಡು ಇಲ್ಲವೆ ಮಡಿ" ಎಂಬುದೇ ಗಾಂಧೀಜಿ ಹೇಳಿಕೊಟ್ಟ ಮಂತ್ರ "ಬ್ರಿಟಿಷರೇ ಭಾರತ ಬಿಟ್ಟು ತೊಲಗಿರಿ" ಎಂದು ಸಾರಲು ಬಂದಿದ್ದೇವೆ ಎನ್ನುವನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಕುಲಕರ್ಣಿಯು ಹಠಮಾಡಬೇಡಿ ಚದುರಿರಿ ಇಲ್ಲಿಂದ ಎಂದಾಗ ನಾವು ಸಭೆ ಸೇರಿಸಿಯೇ ತೀರುವೆವೆಂದು ಪಣ ತೊಟ್ಟು ಬಂದಿದ್ದೇವೆ. ಎಂದು 'ಬೋಲೋ ಭಾರತ ಮಾತಾಕೀ ಜೈ ಮಹಾತ್ಮ ಗಾಂಧೀಜಿಕಿ ಜಯ್' ಎಂಬ ಘೋಷಣೆ ಕೂಗುತ್ತಾ ಮುಂದಡಿ ಇಟ್ಟಾಗ ಕುಲಕರ್ಣಿಯು ಸಿಟ್ಟಿನಿಂದ ರಾಮ್‌ಸಿಂಗ್‌ನಿಗೆ ಗುಂಡು ಹಾರಿಸಿದನು. ರಾಮ್‌ಸಿಂಗ್‌ನು ಮರಣ ಹೊಂದುವನು ಆದರೆ ರಾಮ್‌ಸಿಂಗ್ ರಾಷ್ಟ್ರಧ್ವಜವನ್ನು ಕೆಳಗಿಳಿಸದೆ ತನ್ನ ಛಲವನ್ನು ಸಾಧಿಸುವನು. | |
| | ***ಅಥವಾ*** | |
| | ರಾಮ್‌ಸಿಂಗ್ ಹತ್ಯೆಯಾದ ಸ್ಥಳಕ್ಕೆ ಆಗಮಿಸಿದ ಸೋಮಣ್ಣನು ರಾಮ್‌ಸಿಂಗ್‌ನನ್ನು ನೋಡಿ ಸೈತಾನರೇ ಇಂತಹ ಬಾಲಕನ ಮೇಲೆ ಗುಂಡು ಹಾರಿಸುವ ಹೀನಕಾರ್ಯಕ್ಕೆ ನಿಮ್ಮ ಕೈಗಳಾದರೂ ಹೇಗೆ ಮೇಲೆತ್ತಿದವು ಎಂದಾಗ ಕುಲಕರ್ಣಿ ಅತಿ ಉದ್ಧಟನಾಗಿ ಉತ್ತರಿಸಿದನು ಎಂದನು. ಯಾವ ಮಾತಿಗೆ ಹಟ ಹಿಡಿದ ಭಾರತಮಾತೆಯ ಬಂಧ-ವಿಮೋಚನೆಗೆ. ಗಟ್ಟಿಯಾಗಿ ನಿಂತರೆ ಅದು ಉದ್ಧಟತನವೆ. ಇವನನ್ನು ಹಿಡಿದು ಜೈಲಿಗೆ ಹಾಕಬಹುದಿತ್ತು. ಅವನನ್ನು ಕೊಂದದ್ದು ನಿಮ್ಮ ಪರಿಶ್ರಮವಲ್ಲವೆ ಎಂದು ಸೋಮಣ್ಣ ಹೇಳಿದನು. ಕುಲಕರ್ಣಿಯು ಇವನು ನಮ್ಮ ಆಜ್ಞೆ ಮೀರಿದನು ಎಂದಾಗ ದುಶ್ಚಟಗಳಿಂದ ದೂರಾಗಿ ಎಂದು ಆಜ್ಞೆಕೊಡಿ, ಸ್ವಚ್ಛತೆಯ ಪಾಠ ಕಲಿಸಿ, ಅಜ್ಞಾನ ದೂರ ಮಾಡಿ ಆದರೆ ಪಾರತಂತ್ರ್ಯದ ಕೆಸರಿನಲ್ಲೇ ಕೊಳೆಯುತ್ತಿರಿ ಎಂದು ಆಜ್ಞೆ ಮಾಡಿದರೆ ಅದು ದಾಸ್ಯದ ದ್ಯೋತಕ ಎಂದು ಸೋಮಣ್ಣ ಹೇಳಿದನು. ಕುಲಕರ್ಣಿಯು ಭಾರತ ಮಾತೆಯ ಬಂಧ ವಿಮೋಚನೆಯ ಲಾಭವೇನು ಎಂದಾಗ ಸೋಮಣ್ಣನು ಸ್ವಾತಂತ್ರ್ಯ ಹೋರಾಟ ಲಾಭ ಹಾನಿಗಳ ವ್ಯಾಪಾರವಲ್ಲ ನಾವು ಸ್ವಾತಂತ್ರ್ಯಕ್ಕಾಗಿ ಹೋರಾಡಿ ಸತ್ತರೆ ನಮ್ಮ ಮುಂದಿನ ಪೀಳಿಗೆಯವರು ಅದರ ಫಲವನ್ನು ಸವಿಯುತ್ತಾರೆ. ನೀವು ಫೌಜುದಾರರಾದಾಕ್ಷಣ ನಿಮಗೆ ಸುಖ ಸಿಗುವುದೆಂಬ ಭ್ರಾಂತಿ ಬಿಡಿ ಸುತ್ತಮುತ್ತಲಿನ ಜನರಗೋಳಿಗೆ ನೀವೇ ಕಾರಣರು. ಗೇಣು ಹೊಟ್ಟೆಗಾಗಿ ದೇಶದ ಕಂದಮ್ಮರನ್ನು ಕೊಂದು ಅವರ ರಕ್ತದ ಮಡುವಿನಲ್ಲಿ ಮೆರೆಯುವುದು ಕರ್ತವ್ಯನಿಷ್ಠೆಯೆ ? ದಿಕ್ಕಾರ ನಿಮ್ಮ ಬದುಕಿಗೆ ಶತ ದಿಕ್ಕಾರ ಎಂದು ಹೇಳುತ್ತಾ ಸೋಮಣ್ಣನು ಕುಲಕರ್ಣಿಯ ಕೃತ್ಯವನ್ನು ಖಂಡಿಸಿದನು. | |
| X. | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)** | 1 × 4 = 4 |
| 43. | ಕಂಚುಗಾರನ ..........................................<br>..........................................................<br>..........................................................<br>.......................................... ಪೂಜೆ ಮಾಡುವುದು. | |
| | ***ಅಥವಾ*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ನಾನು ಎಂಬುದ ……………………………………………<br>………………………………………………………<br>………………………………………………………<br>……………………………………… ಕಾರ್ಯಗಳೆಲ್ಲವೂ.<br>***ಉತ್ತರ :***<br>ಕಂಚುಗಾರನ ಬಿಡಾರದಂದದಿ<br>ಕಂಚು ಹಿತ್ತಾಳೆಯ ಪ್ರತಿಮೆಗಳ ನೆರಹಿ<br>ಮಿಂಚಬೇಕೆಂದು ಬಲು ಜ್ಯೋತಿಗಳನು ಹಚ್ಚಿ<br>ವಂಚನೆಯಿಂದಲಿ ಪೂಜೆ ಮಾಡುವುದು ॥<br>**ಅಥವಾ**<br>ನಾನು ಎಂಬುದ ಬಿಟ್ಟು ಜ್ಞಾನಿಗಳೊಡನಾಡಿ<br>ಏನಾದರು ಹರಿ ಪ್ರೇರಣೆಯೆಂದು<br>ಧ್ಯಾನಿಸಿ ಮೌನದಿ ಪುರಂದರ ವಿಠಲನ<br>ಕಾಣದೆ ಮಾಡಿದ ಕಾರ್ಯಗಳೆಲ್ಲವು ॥ | |
| XI. | **ಪದ್ಯಭಾಗದ ಸಾರಾಂಶ ಬರೆಯುವುದು :** | 1 × 4 = 4 |
| | ವಿವರಣೆಗೆ | 3 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 44. | ಮೂಡಮೋಡ ನೋಡೋ ಮೋಡದ ಚಂದನೋಡೋ<br>ಗೋಡೆಗೆ ಕಪ್ಪ ಬಳಿದ್ಹಂಗೆ – ಮಳೆರಾಯ<br>ಬೊರಾಡು ತಾವೆ ಮುಗಿಲಲ್ಲಿ ॥<br>***ಉತ್ತರ :***<br>ಪ್ರಸ್ತುತ ಪದ್ಯಭಾಗದಲ್ಲಿ ರೈತನು ಮೋಡದ ವರ್ಣನೆಯನ್ನು ಮಾಡಿದ್ದಾನೆ. ಬಾರದಿದ್ದ ಮಳೆಯ ಬರುವ ಮುನ್ಸೂಚನೆಯನ್ನು ಕಂಡು ಸಂತಸಗೊಳ್ಳುತ್ತಾನೆ. ಪೂರ್ವ ದಿಕ್ಕಿನಲ್ಲಿ ಆವರಿಸಿದ ದಟ್ಟ ಮೋಡಗಳು ರೈತನಿಗೆ ಗೋಡೆಗೆ ಕಪ್ಪು ಬಣ್ಣ ಬಳಿದಂತೆ ಕಾಣುತ್ತಿವೆ. ಈ ಮಳೆ ಸುರಿಸುವ ಮೋಡಗಳು ಸದ್ದನ್ನು ಮಾಡುತ್ತಿರುವುದನ್ನು ಕಂಡು ತನ್ನ ಸಂಗಡಿಗರಿಗೆ ತೋರಿಸುತ್ತಾನೆ. ಮಳೆಯಿಲ್ಲದೆ ಕಂಗಾಲಾದ ನಮಗೆ ಈ ಮಳೆಯ ಮೋಡವು ಹರ್ಷತಂದಿದೆ ಎಂಬುದು ಈ ಜನಪದ ಗೀತೆಯ ಸಾರಾಂಶ. | |
| XII. | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :**<br>**(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ)** | 1 × 5 = 5 |
| | ಹಿಂದಿನ ಕಾಲದಿಂದಲೂ ಮನುಷ್ಯ ದೇಹದ ಶ್ರಮವನ್ನು ಕಡಿಮೆ ಮಾಡಿಕೊಳ್ಳಲು ಹೊಸ ಹೊಸ ಯಂತ್ರ ಸಾಧನಗಳನ್ನು ಕಂಡುಹಿಡಿಯುತ್ತಲೇ ಇದ್ದಾನೆ. ಪ್ರಾಚೀನ ಕಾಲದಲ್ಲಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ನಡಿಗೆಯಿಂದ ಪ್ರಯಾಣ ಮಾಡಬೇಕಿತ್ತು. ನಾಗರೀಕತೆ ಬೆಳೆದಂತೆ ಬಗೆಬಗೆಯ ಬಂಡಿಗಳು ರೂಢಿಗೆ ಬಂದವು. ಬಂಡಿಗಳನ್ನು ಗಾಡಿಗಳನ್ನು ಎಳೆಯಲು ಎತ್ತು, ಕುದುರೆ ಮೊದಲಾದ ಪ್ರಾಣಿಗಳನ್ನು ಬಳಸಲಾಗುತ್ತಿತ್ತು. ಗಾಡಿಯ ಚಕ್ರಗಳು ಹಳ್ಳಗಳಲ್ಲಿ ಕೆಸರಿನಲ್ಲಿ ಹೂತು ಹೋಗುತ್ತಿದ್ದರಿಂದ ಮರದ ಹಳಿಗಳನ್ನು ದಾರಿಯಲ್ಲಿ ಹಾಸಿ ಗಾಡಿಯ ಚಕ್ರಗಳು ಸುಲಭವಾಗಿ ಉರುಳುವಂತಹ ಏರ್ಪಾಟನ್ನು ಪಾಶ್ಚಾತ್ಯ ದೇಶಗಳಲ್ಲಿ ಮಾಡಲಾಯಿತು. ಕುದುರೆಗಳೇ ಅವುಗಳ ಮೇಲೆ ಗಾಡಿಗಳನ್ನು ಎಳೆಯುತ್ತಿದ್ದವು. ಕಾಲಕ್ರಮೇಣ ಕಬ್ಬಿಣದ ಹಳಿಗಳು ರೂಢಿಗೆ ಬಂದವು. ಈ ಹಳಿಗಳನ್ನೇ 'ರೈಲು' ಎನ್ನುತ್ತಾರೆ. ಇವುಗಳನ್ನು ಹಾಸಿರುವ ದಾರಿಯೇ 'ರೈಲ್ವೇ' ಅಥವಾ ರೈಲುಮಾರ್ಗ. ಉಗಿಯ ಶಕ್ತಿಯಿಂದ ನಡೆಯುವ ಗಾಡಿಗಳು ಬಂದಿದ್ದು 19 ನೇಯ ಶತಮಾನದ ಪ್ರಾರಂಭದಲ್ಲಿ. | |
| 45. | ಎ) ಬಗೆಬಗೆಯ ಬಂಡಿಗಳು ಹೇಗೆ ರೂಢಿಗೆ ಬಂದವು ?<br>***ಉತ್ತರ :*** ನಾಗರೀಕತೆ ಬೆಳೆದಂತೆ ಬಗೆಬಗೆಯ ಬಂಡಿಗಳು ರೂಢಿಗೆ ಬಂದವು.<br>ಬಿ) ಪ್ರಾಚೀನ ಕಾಲದಲ್ಲಿ ಪ್ರಯಾಣ ಹೇಗೆ ಮಾಡಬೇಕಿತ್ತು ?<br>***ಉತ್ತರ :*** ಪ್ರಾಚೀನ ಕಾಲದಲ್ಲಿ ನಡಿಗೆಯಿಂದ ಪ್ರಯಾಣ ಮಾಡಬೇಕಿತ್ತು.<br>ಸಿ) ಮನುಷ್ಯನು ದೇಹದ ಶ್ರಮವನ್ನು ಹೇಗೆ ಕಡಿಮೆ ಮಾಡಿಕೊಳ್ಳುತ್ತಿದ್ದಾನೆ ?<br>***ಉತ್ತರ :*** ಮನುಷ್ಯನು ಹೊಸ ಹೊಸ ಯಂತ್ರ ಸಾಧನಗಳನ್ನು ಕಂಡುಹಿಡಿಯುತ್ತಾ. ದೇಹದ ಶ್ರಮವನ್ನು ಕಡಿಮೆ ಮಾಡಿಕೊಳ್ಳುತ್ತಿದ್ದಾನೆ.<br>ಡಿ) ಪ್ರಾಚೀನ ಕಾಲದಲ್ಲಿ ಪ್ರಾಣಿಗಳನ್ನು ಏಕೆ ಬಳಸಲಾಗುತ್ತಿತ್ತು ?<br>***ಉತ್ತರ :*** ಪ್ರಾಚೀನ ಕಾಲದಲ್ಲಿ ಪ್ರಾಣಿಗಳನ್ನು ಬಂಡಿಗಳನ್ನು, ಗಾಡಿಗಳನ್ನು ಎಳೆಯಲು ಬಳಸಲಾಗುತ್ತಿತ್ತು.<br>ಇ) ಪಾಶ್ಚಾತ್ಯ ದೇಶಗಳಲ್ಲಿ ಮರದ ಹಳಿಗಳನ್ನು ದಾರಿಯಲ್ಲಿ ಹಾಸಿ ಚಕ್ರಗಳು ಸುಲಭವಾಗಿ ಉರುಳುವಂತೆ ಮಾಡಲಾಗುತ್ತಿತ್ತು. ಏಕೆ ?<br>***ಉತ್ತರ :*** ಗಾಡಿಯ ಚಕ್ರಗಳು ಹಳ್ಳಗಳಲ್ಲಿ, ಕೆಸರಿನಲ್ಲಿ ಹೂತು ಹೋಗುತ್ತಿದ್ದರಿಂದ ಮರದ ಹಳಿಗಳನ್ನು ದಾರಿಯಲ್ಲಿ ಹಾಸಿ ಚಕ್ರಗಳು ಸುಲಭವಾಗಿ ಉರುಳುವಂತೆ ಮಾಡಲಾಗುತ್ತಿತ್ತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| XIII. | **ಪ್ರಬಂಧ ಬರೆವಣಿಗೆ :** | 1 × 5 = 5 |
| 46. | ಪ್ರಾಕೃತಿಕ ವಿಕೋಪಕ್ಕೆ ಕಾರಣಗಳು. | |
| | **ಅಥವಾ** | |
| | ಪ್ರಸ್ತುತ ಶಿಕ್ಷಣದಲ್ಲಿ ಮೊಬೈಲ್ ಬಳಕೆಯ ಮಹತ್ವ. | |
| | ಪೀಠಿಕೆ | 1 ಅಂಕ |
| | ವಿಷಯ ಜೋಡಣೆ | 2 ಅಂಕಗಳು |
| | ಉಪಸಂಹಾರ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |
| XIV. | **ಪತ್ರ ಲೇಖನ ಬರೆಯುವುದು :** | 1 × 5 = 5 |
| 47. | ನಿಮ್ಮನ್ನು ಮಂಡ್ಯ ಜಿಲ್ಲೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ 'ನಾಗರತ್ನ' ಎಂದು ಭಾವಿಸಿಕೊಂಡು, ಎಸ್.ಎಸ್.ಎಲ್.ಸಿ. ಪರೀಕ್ಷಾ ಶುಲ್ಕ ಕಳುಹಿಸಿಕೊಡುವಂತೆ ನಿಮ್ಮ ತಂದೆಯರಿಗೆ ಒಂದು ಪತ್ರವನ್ನು ಬರೆಯಿರಿ. | |
| | **ಅಥವಾ** | |
| | ನಿಮ್ಮನ್ನು ಬೇಲೂರಿನ ಸರ್ಕಾರಿ ಶಾಲೆಯ ವಿದ್ಯಾರ್ಥಿ 'ಆಕಾಶ್' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಗೆ ಶುದ್ಧ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸಿಕೊಡುವಂತೆ ಕೋರಿ, ನಿಮ್ಮ ಊರಿನ ಗ್ರಾಮಪಂಚಾಯಿತಿ ಅಧ್ಯಕ್ಷರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ. | |
| | *ವೈಯಕ್ತಿಕ ಪತ್ರ :* | |
| | ಇಂದ, ವಿಳಾಸ, ಸಂಬೋಧನೆ, ದಿನಾಂಕ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಗೆ ವಿಳಾಸ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | *ವ್ಯಾವಹಾರಿಕ ಪತ್ರ :* | |
| | ಇಂದ, ಗೆ, ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸ್ಥಳ, ದಿನಾಂಕ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |